15 ಪ್ರಶ್ನೆಗಳ ಪೈಕಿ 11 ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ ಒಟ್ಟು 161 ಪ್ರಶ್ನೆಗಳ ಪೈಕಿ 85 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಕೊಡಗು ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಿಂದ ನಡೆದ ಕೊಲೆ ಪ್ರಕರಣಗಳು

4411 - ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಿಂದ ಎಷ್ಟು ಕೊಲೆ, ದರೋಡೆ, ಕಳ್ಳತನ ಪ್ರಕರಣಗಳು ದಾಖಲಾಗಿವೆ?

ಆ) ಆ ಪೈಕಿ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಿ ಎಷ್ಟು ಜನರಿಗೆ ಶಿಕ್ಷೆ ನೀಡಲಾಗಿದೆ?

ಇ) ಇನ್ನು ಎಷ್ಟು ಪ್ರಕರಣಗಳನ್ನು ಪತ್ತೆ ಮಾಡಬೇಕಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ವಿವರಗಳು ಈ ಕೆಳಕಂಡಂತಿವೆ

ಕ್ರಮ ಸಂಖ್ಯೆ	ಪ್ರಕರಣಗಳ ವಿವರ	1999	2000 (30.10.2000)
1.	ಕೊಲೆ	30	28
2.	ದರೋಡೆ	02	03
3.	ಕಳ್ಳತನ	372	217

ಆ)

		1999		2000 (30.10.2000)	
		ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ	ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ	ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ	ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ
1.	ಕೊಲೆ	29	-	26	-
2.	ದರೋಡೆ	01	-	02	-
3.	ಕಳ್ಳತನ	26	-	69	01

೫)

	ವಿವರ	1999 ಪತ್ತೆ ಹಚ್ಚಲು ಬಾಕಿ ಯಿರುವ ಪ್ರಕರಣಗಳ ಸಂಖ್ಯೆ	2000 (30.10.2000) ಪತ್ತೆ ಹಚ್ಚಲು ಬಾಕಿಯಿರುವ ಪ್ರಕರಣಗಳ ಸಂಖ್ಯೆ
1.	ಕೊಲೆ	01 (ಆರೋಪಿಗಳ ಪತ್ತೆಗಾಗಿ ಮತ್ತು ಇತರ ಕಾರಣಕ್ಕಾಗಿ ಬಾಕಿ ಇದೆ)	02 (ಆರೋಪಿಗಳ ಪತ್ತೆಗಾಗಿ ಮತ್ತು ಇತರೆ ಕಾರಣಕ್ಕಾಗಿ ಬಾಕಿ ಇದೆ)
2.	ದರೋಡೆ	-	01 -ಡಿಟೋ-
3.	ಕಳ್ಳತನ	16 (ಆರೋಪಿಗಳ ಪತ್ತೆಗಾಗಿ ಮತ್ತು ಇತರೆ ಕಾರಣಕ್ಕಾಗಿ ಬಾಕಿ ಇದೆ)	69 (ಆರೋಪಿಗಳ ಪತ್ತೆಗಾಗಿ ಮತ್ತು ಇತರೆ ಕಾರಣಕ್ಕಾಗಿ ಬಾಕಿ ಇದೆ)

ಬಾಂಡ್ ಯೋಜನೆ

4412 - ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಪದ್ಮನಾಭನಗರ ವಾರ್ಡಿನ ಬಾಂಡ್ ರಸ್ತೆಗಳನ್ನು ನಿರ್ಮಿಸಲು ತೆಗೆದುಕೊಂಡಿರುವ ಗುತ್ತಿಗೆ ಕೆಲಸಗಳು ಯಾವುವು ? ಒಂದು ವರ್ಷ ಕಳೆದರೂ ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣಗಳೇನು ?

ಆ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಬೆಂಗಳೂರು ಮಹಾನಗರ ಪಾಲಿಕೆಗೆ ಎಷ್ಟು ? ದಿನಗಳ ಕಾಲಾವಕಾಶ ಬೇಕಾಗುವುದು ? ಈ ಕಾಮಗಾರಿಯನ್ನು ಶೀಘ್ರದಲ್ಲೆ ಮುಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :

ಅ) 1. ಸುಬ್ರಮಣ್ಯಪುರ ಮುಖ್ಯರಸ್ತೆ

2. 100 ಅಡಿ ವರ್ತುಲ ರಸ್ತೆ

ಈ ರಸ್ತೆಯ ಅಭಿವೃದ್ಧಿ ಕಾರ್ಯವು ಪ್ರಗತಿಯಲ್ಲಿದ್ದು, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಈ ರಸ್ತೆಗೆ ನೀರು ಮತ್ತು ನಿರ್ಮಲೀಕರಣ ಕೊಳವೆಗಳನ್ನು ಅಳವಡಿಸಬೇಕಾಗಿರುವುದರಿಂದ, ಈ ಕಾಮಗಾರಿಯು ಕುಂಠಿತಗೊಂಡಿದೆ. 100 ಅಡಿ ರಿಂಗ್ ರಸ್ತೆಯ ಡಾಂಬರೀಕರಣದ ಕಾರ್ಯವು ಪ್ರಗತಿಯಲ್ಲಿದ್ದು, ಈಗಾಗಲೇ ಎರಡು ಪದರು ಡಾಂಬರೀಕರಣ